9. ಬಸವರಾಜ ಪಾಟೀಲ್ ಅಟ್ಟೂರ್

10. ವಸತಿ ಸಮಿತಿ (ಹೌಸ್ ಕಮಿಟಿ)
(ಉಪ ಸಭಾಪತಿ ಮತ್ತು ಉಪಾಧ್ಯಕ್ಷರು)
ಶ್ರೀಯುತರುಗಳಾದ :

1. ಉಪ ಸಭಾಪತಿ
2. ಉಪ ಸಭಾಧ್ಯಕ್ಷರು
3. ಆರ್. ನಾರಾಯಣ
4. ಶಿವಶೇಖರಗೌಡ ಶಿರವಾಳ
5. ಎಂ. ತಮ್ಮಣ
6. ಬಸವಂತರೆಡ್ಡಿ ಮಾವಕವಲ್ಲಿ
7. ಮಹೇಂದ್ರ ಕುಮಾರ ಕಲ್ಲಪ್ಪ
8. ಮಲ್ಲಜಮ್ಮ
9. ದಮಯಂತಿ ಬೋರೇಗೌಡ
10. ಎಂ. ಎಸ್. ಪಾಟೀಲ್

11. ಮಂಗಳೂರು ವಿಶ್ವವಿದ್ಯಾನಿಲಯ
ಶ್ರೀಯುತರುಗಳಾದ

1. ಡಿ.ಎ. ಚೆನ್ನಪ್ಪ
2. ಕೆ. ಕುಶಲ
3. ಹೆಚ್.ಆರ್. ರಾಜು
4. ಪಿ. ಬಸವರಾಜ
5. ಗಂಗಾಧರ ಗೌಡ

ಶ್ರೀ ಬಿ.ಎಸ್. ಯಡಿಯೂರಪ್ಪ :– ಈ ಸಮಿತಿಗಳನ್ನೆಲ್ಲಾ ತಾವು ಅನೌನ್ಸ್ ಮಾಡಿದಮೇಲೆ. .

ಶ್ರೀ ಡಿ.ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೇ ಮೊನ್ನೆ ತಮ್ಮ ಕೊಟ್ಟಡಿಯಲ್ಲಿ ಒಂದು ಆಪಾದನೆ ಮಾಡಿದ್ದರು. ಯೋಜನಾ ಮಂತ್ರಿಗಳು ನನಗೆ ಉತ್ತರ ಹೇಳಲಿಕ್ಕೆ ಅವಕಾಶ ಸಿಗಲಿಲ್ಲ, ಎಲ್ಲರೂ ಒಟ್ಟಿಗೆ ಗಲಾಟೆ ಮಾಡಿದ್ದರಿಂದ ಎಂದು ಹೇಳಿದ್ದರು. ಅದಕ್ಕಾಗಿ ತಮಗೆ ಅವಕಾಶ ಸಿಗಬೇಕೆನ್ನುವ ಕಾರಣಕ್ಕಾಗಿ ಅರ್ಧಗಂಟೆ ಅಂದರೆ ಅರ್ಧಗಂಟೆಗೆ ಮುಗಿಸುವುದಕ್ಕೆ ತಾವು ಅನುಮತಿಯನ್ನು ಕೊಟ್ಟರೆ.....

ಅಧ್ಯಕ್ಷರು :– ಆಗಬಹುದು.

ಅಲ್ಪ ಕಾಲಾವಧಿ ಚರ್ಚೆ

ವಿಷಯ :– 1991–92 ರ ಯೋಜನಾ ಅವಧಿಯಲ್ಲಿ ಕಾಯ್ದಿರಿಸಲಾದ ಹಣದ ಬಗ್ಗೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆ ಇವತ್ತು ಚರ್ಚೆಗೆ ಬಂದುದಕ್ಕೆ ಮಾನ್ಯ ಮಂತ್ರಿಗಳ ಉತ್ತರದಿಂದ ಉದ್ಭವಿಸಿದಂತ ಒಂದು ಪರಿಸ್ಥಿತಿಯಿಂದಾಗಿದೆ. ಆ ಪರಿಸ್ಥಿತಿ 1991–92ನೇ ಸಾಲಿನ ರಾಜ್ಯದ ಯೋಜನೆಯ ಅಡಿಯಲ್ಲಿ 1200 ಕೋಟಿ 34 ಲಕ್ಷ ರೂಪಾಯಿ ರಾಜ್ಯದ ವಲಯಕ್ಕೂ 357 ಕೋಟಿ ರೂಪಾಯಿಗಳನ್ನು ಜಿಲ್ಲಾ ವಲಯಕ್ಕು ಹೀಗೆ 1557 ಕೋಟಿ 80 ಲಕ್ಷ ರೂಪಾಯಿ 1991–92ನೇ ಸಾಲಿಗೆ ಯೋಜನಾವೆಚ್ಚಕ್ಕಾಗಿ ನಿಗದಿಪಡಿಸಲಾಗಿದ್ದು ಈ ವೆಚ್ಚ 31–3–92ಕ್ಕೆ ವರದಿಯಲ್ಲಿ ಕೊಟ್ಟಿರುವ ಹಾಗೆ ಸುಮಾರು 154 ಕೋಟಿ ರೂಪಾಯಿಗಳು ನನ್ನ ಲೆಕ್ಕದಂತೆ ಜಿಲ್ಲಾವಲಯದಲ್ಲಿ ಖರ್ಚಾಗಿಲ್ಲ. ರಾಜ್ಯದ ವಲಯದಲ್ಲಿ ಕೂಡ ಬಹಳಷ್ಟು ಹಣ ಖರ್ಚಾಗಿಲ್ಲ. ಮೂರನೇ ಒಂದರಷ್ಟು ಹಣ, ಮಾರ್ಚ್ 31ಕ್ಕೆ ಪ್ರಸಕ್ತ ಆಯವ್ಯಯದಲ್ಲಿ ಒದಗಿಸಲಾಗಿದ್ದ ಹಣ ಖರ್ಚಾಗಿಲ್ಲ ಎಂಬ ಆಪಾದನೆ ಇದೆ. ಈ ಆಪಾದನೆಗೆ

ಪೂರಕವಾಗಿ ನಾನು ಒಂದೆರಡು ಮಾತು ಹೇಳಿದೆ. ಇದರಲ್ಲಿ ಬಹಳ ಮುಖ್ಯವಾಗಿ ಮುಖ್ಯ ಮಂತ್ರಿಗಳು 1992–93ರ ಆಯವ್ಯಯದಲ್ಲಿ ಪುಟ 22, ಪ್ಯಾರಾ 37ರಲ್ಲಿ ಬಹಳ ಹೊಗಳಿಕೆಯ ಮಾತುಗಳನ್ನು ಆಡಿದ್ದಾರೆ.

"ಪ್ರಸಕ್ತ ವರ್ಷದಲ್ಲಿ ಯೋಜನಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿನ ನಮ್ಮ ಕಾರ್ಯ ನಿರ್ವಹಣೆಯು, ರಾಜ್ಯವು ತನ್ನ ಎಲ್ಲಾ ಹೊಣೆಗಾರಿಕೆಗಳನ್ನು ಹಾಗೂ ವಾಸ್ತವಿಕ ಗುರಿಯನ್ನು ಸಾಧಿಸುತ್ತದೆಂಬ ವಿಶ್ವಾಸವನ್ನು ನಮ್ಮಲ್ಲಿ ಮೂಡಿಸಿದೆ.

ಅದೇ ರೀತಿ ಯೋಜನಾ ಆಯೋಗದ ಉಪಾಧ್ಯಕ್ಷರು ಒಂದು ಮಾತು ಹೇಳಿದ್ದಾರೆ. ಅದನ್ನು 24ನೇ ಪುಟದಲ್ಲಿ ರಾಜ್ಯದ ಹಣಕಾಸಿನ ಮತ್ತು ಅದರ ಜವಾಬ್ದಾರಿಯನ್ನು ನಿರ್ವಹಣೆ ಮಾಡತಕ್ಕ ಮುಖ್ಯ ಮಂತ್ರಿಗಳು ಉಲ್ಲೇಖ ಮಾಡಿದ್ದಾರೆ.

ಈ ಬಗ್ಗೆ ಯೋಜನಾ ಆಯೋಗದ ಉಪಾಧ್ಯಕ್ಷರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

"ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಮತ್ತು ವಿದೇಶಿ ನೆರವು ಪಡೆದ ಯೋಜನೆಗಳಿಗೆ ಕೇಂದ್ರದ ನೆರವನ್ನು ಹೆಚ್ಚಾಗಿ ಬಳಸಿಕೊಂಡಿರುವುದಕ್ಕೆ ಸಂಬಂಧಪಟ್ಟಂತೆ ನೀವು ನೀಡಿದ ಅಂಕಿಅಂಶಗಳ ಬಗ್ಗೆ ನನಗೆ ಪೂರ್ಣ ವಿಶ್ವಾಸವಿದೆ. ಭಾರತದ ಅರ್ಥವ್ಯವಸ್ಥೆಯ ವಿಕಸನ ಶಕ್ತಿ, ನಮ್ಮ ಜನರ ನವನಿರ್ಮಾಣ ಶಕ್ತಿ ಹಾಗೂ ನಿಮ್ಮ ಕ್ರಿಯಾಶೀಲ ನೇತೃತ್ವ – ಇವು ಮೂರು ಕೂಡಿಕೊಂಡಲ್ಲಿ, ಎಂಟನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ನೀವು ಗಣನೀಯ ಪ್ರಗತಿ ಸಾಧಿಸಬಲ್ಲಿರಿ ಎಂಬುದರಲ್ಲಿ ನನಗೆ ಸಂದೇಹವಿಲ್ಲ."

ಮಾನ್ಯ ಅಧ್ಯಕ್ಷರೆ, ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣದ ಮಿತಿ ಏನು? ಕಳೆದ ಸಾರಿ ಕೇವಲ ಹತ್ತು ಕೋಟಿ ರೂಪಾಯಿಗಳನ್ನು ಅಡಿಷನಲ್ ರಿಸೋರ್ಸ್‌ಸ್ ಮೊಬಿಲೈಸೇಷನ್ ಎಂದು ಈ ಪಟ್ಟಿಯಲ್ಲಿ ಹಾಕಿಕೊಂಡಿದ್ದಾರೆ. ಪರಿಷ್ಕೃತ ಪಟ್ಟಿಯನ್ನು ನೋಡಿದೆ ನಾನು. ಏನು ಇದರ ಅಂದಾಜು ಅಂದರೆ ಹತ್ತು ಕೋಟಿ 16 ಲಕ್ಷ ರೂಪಾಯಿಗಳಲ್ಲಿ ಪರಿಷ್ಕೃತ ಅಂದಾಜು ಸಂಪಾದನೆ ಮಾಡಿರುವುದು ಶೂನ್ಯ. ಪುಟ 94 ರಲ್ಲಿದೆ. ಈ ವರ್ಷ ಹಾಕಿಕೊಂಡಿರುವ ಅಂದಾಜು ಅಡಿಷನಲ್ ರಿಸೋರ್ಸ್‌ಸ್ ಮೊಬಲೈಸೇಷನ್ 244 ಕೋಟಿ 84 ಲಕ್ಷ ರೂಪಾಯಿಗಳು. ಹತ್ತು ಕೋಟಿಯಲ್ಲಿ ಒಂದು ರೂಪಾಯಿ ಸಹ ಖರ್ಚು ಮಾಡುವುದಕ್ಕಾಗಿಲ್ಲ. ಆದರೆ ಇಲ್ಲಿ ಉಪಾಧ್ಯಕ್ಷರ ಕೈಯಲ್ಲಿ ಬರೆಸಿಕೊಂಡಿದ್ದೀರಿ – ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಿಸುವಲ್ಲಿ ಬಹಳ ಡೊಡ್ಡ ಸಾಧನೆ ಆಗಿದೆ ಎಂದು. ನಾನು ಹೆಚ್ಚು ಸಮಯ ತೆದೆದುಕೊಳ್ಳಬಾರದೆಂಬ ದೃಷ್ಟಿಯಿಂದ ತಮ್ಮ ಗಮನಕ್ಕೆ ಒಂದೇ ಒಂದು ಫಿಗರ್ ಹೇಳುತ್ತೇನೆ. 1992–93ಕ್ಕೆ ಕೇಂದ್ರದ ತೆರಿಗೆಯಲ್ಲಿ ಬಂದ ಪಾಲು 839.34 ಕೋಟಿ ರೂಪಾಯಿಗಳು 1991–92ರಲ್ಲಿ ನಿಮಗೆ 721.78 ಕೋಟಿ ರೂಪಾಯಿಗಳು ಬಂದಿದೆ. ಅರ್ಥಾತ್ 177.88 ಅಥವಾ 118 ಕೋಟಿ ರೂಪಾಯಿಗಳು ಕೇಂದ್ರದ ತೆರಿಗೆಯಲ್ಲಿ ನಿಮಗೆ ಹೆಚ್ಚಿನ ಪಾಲು ಸಿಕ್ಕಿದೆ. ಅನುದಾನದಲ್ಲಿ ಕಳೆದ ಸಾರಿ ಸಿಕ್ಕಿದ್ದು ನಿಮಗೆ 413.99 ಕೋಟಿ ರೂಪಾಯಿಗಳು, ಈ ಸಾರಿ ಸಿಕ್ಕಿರತಕ್ಕ ಅನುದಾನ 637 ಕೋಟಿ ರೂಪಾಯಿಗಳು. ಅರ್ಥಾತ್ 224 ಕೋಟಿ ರೂಪಾಯಿಗಳು ಅನುದಾನದಲ್ಲಿ ಜಾಸ್ತಿ ಬಂದಿದೆ. ಕೇಂದ್ರದ ತೆರಿಗೆಯಲ್ಲಿ 118 ಕೋಟಿ ರೂಪಾಯಿ ಜಾಸ್ತಿ ಬಂದಿದೆ. 362 ಕೋಟಿ ರೂಪಾಯಿ ಕೇಂದ್ರದಿಂದ ಬಂದಿರತಕ್ಕಂಥ ಹಣ. ಆದರೆ ನೀವು ಬೆನ್ನು ತಟ್ಟಿಕೊಂಡಿದ್ದೀರಿ. ಕೇಂದ್ರದಲ್ಲಿ ಶೇಕಡ 36 ರಷ್ಟು ಹೆಚ್ಚಳವಾಗಿರುವುದಕ್ಕೆ ನಿಮಗೆ ಏತಕ್ಕೆ ಕೀರ್ತಿ? ಈ ಕೀರ್ತಿ ಕೇಂದ್ರ ಸರ್ಕಾರದ ಅಡಿಷನಲ್ ರಿಸೋರ್ಸಸ್. ನೀವು 1992–93ನೇ ಸಾಲಿನಲ್ಲಿ ಯೋಜನಾ ಆಯೋಗ ಒಪ್ಪಿಕೊಂಡಿರುವುದು 915 ಕೋಟಿ. ಕಳೆದಸಾರಿಗಿಂತ ಈ ಸಾರಿ ಜಾಸ್ತಿಯಾಗಿರುವುದು ಎಷ್ಟು ಎಂದರೆ 357 ಕೋಟಿ ರೂಪಾಯಿ ಜಾಸ್ತಿಯಾಗಿದೆ. ಈ 357 ಕೋಟಿಗೆ ಕೇಂದ್ರದಿಂದ ಬಂದಿರತಕ್ಕದ್ದು 362 ಕೋಟಿ. ಇದರಲ್ಲಿ ಬೆನ್ನು ಯಾರು ತಟ್ಟಿಕೊಳ್ಳಬೇಕು? ನೀವು ಈ ಸಾರಿ ಅನುಮೋದಿತ ಯೋಜನೆಗಿಂತ ಹೆಚ್ಚು ಅಂದರೆ 2158 ಕೋಟಿ ರೂಪಾಯಿಗಳನ್ನು ಯೋಜನಾ ವೆಚ್ಚದಲ್ಲಿ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಕಳೆದಸಾರಿ ಹೋಲಿಕೆ ಮಾಡಿದರೆ ಈ ಸಾರಿ 600 ಕೋಟಿ ಜಾಸ್ತಿ.

ಆರ್ಥಾತ್ 357 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದಿರುವುದು ತೆರಿಗೆ ಪಾಲು ಅನುದಾನವನ್ನು ಕಳೆದರೆ 244 ಕೋಟಿ ರೂಪಾಯಿ ನೀವು ಅಡಿಷನಲ್ ರಿಸೋರ್ಸ್‌ಸ್ ಮೊಬಲೈಸ್ ಮಾಡಬೇಕು. ಕಳೆದ ವರ್ಷ ಮೊಬಲೈಸ್ ಮಾಡುವುದರಲ್ಲಿ ಸೊನ್ನೆ. ಹೀಗಾಗಿ ನಿಮ್ಮ ಮೇಲೆ ನಾವು ವಿಶ್ವಾಸ ಹೇಗಿಡಬೇಕು.? ಈ ಯೋಜನೆಗೆ ಖರ್ಚು ಮಾಡಿರುವ ಹಣದ ವಿವರಣೆ ನಿನ್ನೆ ಸದನದಲ್ಲಿ ಕೊಟ್ಟಿದ್ದೇನೆ. ಮತ್ತೆ ಬೇಕು ಎಂದರೆ ವಿವರವಾಗಿ ಕೊಡುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನನ್ನ ಲೆಕ್ಕದಲ್ಲಿ ಮಾರ್ಚ್ 31ಕ್ಕೆ 518 ಕೋಟಿ ರೂಪಾಯಿ ನಷ್ಟ ಹಣ ಸರಿಸುಮಾರು ಲಕ್ಕ ಕೊಟ್ಟಾಗ ಖರ್ಚಾಗಿಲ್ಲ. ಅದು ಏತಕ್ಕೆ ಖರ್ಚಾಗಿಲ್ಲ? ಖರ್ಚಾಗದೇ ಇದ್ದರೆ ಇದು ಜನರಿಗೆ ಮಾಡಿದಂಥ ದ್ರೋಹ ಆಗುವುದಿಲ್ಲವೆ? ಜನರಿಗೆ ಮಾಡಿದಂಥ ಮೋಸ ಆಗುವುದಿಲ್ಲವೆ? ಇಂಥ ದೊಡ್ಡ ದೊಡ್ಡ ವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಯೋಜನೆಗಳನ್ನು ಮಾಡುತ್ತೀರೆಂದು ವಿಶ್ವಾಸದಿಂದ ನಿಮ್ಮನ್ನು ಅಲ್ಲಿ ಕೂರಿಸಿದರೆ ನೀವು ಲೆಕ್ಕ ಕೊಡುವಾಗ ಜನರಿಗೆ ಮೋಸ ಮಾಡುವಂಥ ಕೆಲಸ ಬೇಡ. ಮುಂದಿನ ವರ್ಷ 2158 ಕೋಟಿ ರೂಪಾಯಿಯ ಯೋಜನೆ ಹಾಕಿದ್ದೇವೆ ಎಂದು ಹೇಳಿ ಜನರಿಗೆ ಮೋಸ ಮಾಡತಕ್ಕ ಕೆಲಸ ಮಾಡಬಾರದು. ಯೋಜನೆಯಲ್ಲಿ ಖರ್ಚು ಮಾಡತಕ್ಕ ಪ್ರತಿಯೊಂದು ಬಿಡಿಗಾಸು ಕೂಡ ಈ ರಾಜ್ಯದ ಆಸ್ತಿಯನ್ನು ನಿರ್ಮಾಣ ಮಾಡತಕ್ಕ ಒಂದು ಭಾಗ. ಇಂಥ ಆಸ್ತಿಯನ್ನು ನಿರ್ಮಾಣ ಮಾಡತಕ್ಕ ಯೋಜನೆಯ ವೆಚ್ಚ ಖರ್ಚಾಗದಿದ್ದರೆ ಈ ಸದನಕ್ಕೆ ವಿವರಣೆಯನ್ನು ಕೋಡಬೇಕೆಂದು ಕೇಳಿಕೊಳ್ಳುತೇನೆ. ಬೇಕು ಎಂದರೆ ಫಿಗರ್ಸ್ ಎಲ್ಲವನ್ನೂ ಬ್ರೇಕಪ್ ಮಾಡಿ ಇಟ್ಟಿದ್ದೇನೆ. ನಿಮಗೆ ಕೊಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ(ಯಲಬುರ್ಗ):– ಅಧ್ಯಕ್ಷರೆ, ಪ್ರಶ್ನೆ ನನ್ನದು. ನನಗೆ ಅವಕಾಶ ಕೊಡಬೇಕು. ಅಧ್ಯಕ್ಷರೇ, ಇವತ್ತಿನ ದಿವಸ ಈ ಪ್ರಶ್ನೆ ಉತ್ತರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಾಜರಾಗಿ ಉತ್ತರ ಕೊಟ್ಟಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಏಕೆಂದರೆ. ಮುಖ್ಯಮಂತ್ರಿಗಳು ಹಣಕಾಸಿನ ಮಂತ್ರಿಗಳೂ ಹೌದು. ಹೀಗಾಗಿ 31ನೇ ತಾರೀಖಿನ ದಿವಸ ಈ ಪ್ರಶ್ನೆ ಬಂತು. ಇದಕ್ಕೆ ಉತ್ತರ ಕೊಡುವಾಗ ಈ ಉತ್ತರ ನಮಗೆ ತೃಪ್ತಿಯಾಗಲಿಲ್ಲ. ಹಣಕಾಸಿನ ನಿರ್ವಹಣೆ ಮುಖ್ಯಮಂತ್ರಿಗಳ ಇಲಾಖೆಗೆ ಬರುವುದರಿಂದ ಹಣಕಾಸಿನ ಮಂತ್ರಿಗಳೂ ಅವರೇ ಆಗಿರುವುದರಿಂದ ಅವರೇ ಉತ್ತರ ಕೋಡಬೇಕೆಂದು ಹೇಳಿದ್ದೆವು. ಅದರ ಪ್ರಕಾರ ಅವರೇ ಉತ್ತರ ಕೊಡುತ್ತಾರೆಂದು ಸದನದಲ್ಲಿ ಸಚೆವರು ಹೇಳಿದರು. ಆದರೆ ದುರಾದೃಷ್ಟ ಮುಖ್ಯಮಂತ್ರಿಗಳು ಸದನದಲ್ಲಿಲ್ಲ. ಅಧ್ಯಕ್ಷರೇ, ತಮಗೆ ಗೊತ್ತಿದೆ 1991–92ನೇ ಸಾಲಿನ ಒಂದು ಯೋಜನೆಗೆ ಒಟ್ಟು 1557.80 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಎರಡು ದಿವಸಗಳ ಹಿಂದೆ 1991–92 ನೇ ಸಾಲು ಮುಗಿದುಹೋಯಿತು. ಎರಡು ದಿವಸ ಆಯಿತು 8ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿ. ಇದರ ಜೊತೆಗೆ ಹೊಸ ಹಣಕಾಸು ವರ್ಷ ಕೂಡ ಪ್ರಾರಂಭವಾಯಿತು. ಕಳೆದ ವರ್ಷ ರಾಜ್ಯ ಸರ್ಕಾರ ಕೇಂದ್ರದ ಯೋಜನಾ ಆಯೋಗ ಮತ್ತು ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ 1557.80 ಕೋಟಿ ರೂಪಾಯಿಗಳನ್ನು ಯೋಜನಾ ವೆಚ್ಚಕ್ಕಾಗಿ ನಿಗದಿಪಡಿಸಿ ಸದನದಲ್ಲಿ ಕೂಡ ಮತ ಯಾಚನೆ ತೆಗೆದುಕೊಂಡಿದ್ದಾರೆ. ಆದರೆ ದುರಾದೃಷ್ಟ ಸರ್ಕಾರ ಕೊಟ್ಟಿರುವ ಆಂಕಿಅಂಶಗಳ ಪ್ರಕಾರ ಫೆಬ್ರವರಿವರೆಗೆ ರಾಜ್ಯ ಸರ್ಕಾರ ಒಟ್ಟು ಹಣ ಎಷ್ಟು ಬಿಡುಗಡೆ ಮಾಡಿದೆ ಮತ್ತು ಎಷ್ಟು ಖರ್ಚು ಮಾಡಿದೆ ಎಂದರೆ, ರಾಜ್ಯ ವಲಯದಲ್ಲಿ ಒಟ್ಟು 1200.34 ಕೋಟಿ ರೂಪಾಯಿ ನಿಗಧಿ ಮಾಡಿದ್ದರು. ಮತ್ತು ಅದರ ಜೊತೆಗೆ ಜಿಲ್ಲಾ ವಲಯದಲ್ಲಿ 357.46 ಕೋಟಿ ರೂಪಾಯಿ ನಿಗಧಿ ಮಾಡಿದ್ದರು. ಆದರೆ ಫೆಬ್ರವರಿವರೆಗೆ ಒಟ್ಟು ವೆಚ್ಚ ರಾಜ್ಯವಲಯ ಮತ್ತು ಜಿಲ್ಲಾ ವಲಯದ್ದು 979. ಕೋಟಿ ರೂಪಾಯಿಗಳು ಮಾತ್ರ. ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಸರ್ಕಾರಕ್ಕೆ ಯೋಜನೆಯಲ್ಲಿ ಹಣ ಖರ್ಚುಮಾಡುವುದಕ್ಕೆ ಅವರ ಹತ್ತಿರ ಹಣ ಇಲ್ಲ. ರಾಜ್ಯದ ಜನತೆಗೆ ಬಹಳ ಮೋಸ ಮಾಡಿದ್ದೀರಿ, ದ್ರೋಹ ಮಾಡಿದ್ದೀರಿ ಎನ್ನದೇ ವಿಧಿ ಇಲ್ಲ. ಅಧ್ಯಕ್ಷರೇ, ತಮಗೆ ಗೊತ್ತಿರಬಹುದು. ಇವತ್ತು ಉತ್ತರದಲ್ಲಿ ಮಾನ್ಯ ಸಚೆವರು ಹೇಳುತ್ತಾರೆ. 31.3.92ರ ದಿವಸ ಉಳಿದ ಎಲ್ಲಾ ಹಣ ಬಾಕಿ ನಿಂತಿದೆ ಅದನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಇಲ್ಲಿಯವರೆಗೆ ಎಷ್ಟು ಬಿಡುಗಡೆ

ಮಾಡಿದ್ದಾರೋ ಗೊತ್ತಿಲ್ಲ. ಉಳಿದ ಒಂದು ದಿವಸದಲ್ಲಿ 600 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಖರ್ಚು ಮಾಡುವುದಕ್ಕೆ ಹೇಗೆ ಸಾಧ್ಯ? ಜೊತೆಗೆ ನಾನು ಇವತ್ತು ಜಿಲ್ಲಾವಾರು ಪ್ರಗತಿಯ ಬಗ್ಗೆ ಹೇಳುತ್ತೇನೆ. ಜಿಲ್ಲಾವಾರು ಪ್ರಗತಿಯ ಬಗ್ಗೆ ಕೊಟ್ಟಿದ್ದಾರೆ. ಇವತ್ತು 20 ಜಿಲ್ಲೆಗಳ ಜಿಲ್ಲಾವಾರು ವಲಯಗಳ ಬಗ್ಗೆ ಒಂದು ಹೇಳುತ್ತೇನೆ. ಇವತ್ತು ಬೆಂಗಳೂರು ನಗರ ಜಿಲ್ಲೆ. ನಗರಜಿಲ್ಲೆಗೆ ಪ್ಲಾನ್‌ಔಟಲೇ ಇದಕ್ಕೆ ನಿಗಧಿ ಮಾಡಿದ್ದು 7.39 ಕೋಟಿ ರೂಪಾಯಿ. ಆದರೆ ಫೆಬ್ರವರಿ ಅಂತ್ಯದ ಒಳಗೆ ಬಿಡುಗಡೆ ಮಾಡಿದ್ದು 3.66 ಕೋಟಿ ರೂಪಾಯಿಗಳು. ಉಪಯೋಗ ಆಗಿದ್ದು 3.60 ಕೋಟಿ ರೂಪಾಯಿಗಳು. ಈಗ ಗಣ್ಯ ನಾಯಕರನ್ನು ಹೊಂದಿರತಕ್ಕ ಜಿಲ್ಲೆ ಬಗ್ಗೆ ಹೇಳುತ್ತೇನೆ. ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರು, ಬಿಜೆಪಿ ಪಕ್ಷದ ಮುಖಂಡರಾದ ಯಡಿಯೂರಪ್ಪನವರು ಬಂದಿರತಕ್ಕ ಶಿವಮೊಗ್ಗ ಜಿಲ್ಲೆ ಬಗ್ಗೆ ಹೇಳುತ್ತೇನೆ. ಇಂತಹ ಪ್ರಮುಖ ನಾಯಕರು ಬಂದಿರುವ ಈ ಜಿಲ್ಲೆಯ ಹಣೇಬರಹ ಹೇಳಬೇಕಾಗುತ್ತದೆ. ಶಿವಮೊಗ್ಗ ಜಿಲ್ಲೆಯ ಒಟ್ಟು ಯೋಜನೆ ಪ್ಲಾನ್ ಔಟಲೇ 16.51 ಕೋಟಿ ರೂಪಾಯಿಗಳು. ಅಲ್ಲದೆ ಹಣ ಬಿಡುಗಡೆ ಆಗಿರತಕ್ಕದ್ದು 9 ಕೋಟಿ 8 ಲಕ್ಷ ರೂಪಾಯಿಗಳು. ವೆಚ್ಚ ಆಗಿರತಕ್ಕದ್ದು 8 ಕೋಟಿ 1 ಲಕ್ಷ ರೂಪಾಯಿಗಳು. ನಮ್ಮ ಅಧ್ಯಕ್ಷರು ಮಂಡ್ಯ ಜಿಲ್ಲೆಯಿಂದ ಬಂದಿದ್ದಾರೆ. ಮಂಡ್ಯ ಜಿಲ್ಲೆ ಬಗ್ಗೆ ನಾನು ಹೇಳಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:– ಮುಂಡ ಎಂದರೆ ತಲೆ ಎಂದು ಆಗುತ್ತದೆ. ತಾವು ಮಂಡ್ಯ ಎಂದು ಸರಿಯಾಗಿ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ :– ಉತ್ತರ ಕನ್ನಡ ಭಾಷೆ ಹಾಗೇ ಇದೆ. ನಮ್ಮ ಭಾಷೆ ಹೇಗೋ ಹಾಗೆ ಮಾತನಾಡುತ್ತೇವೆ. ನಿಮ್ಮಂದ ನಾವು ಕಲಿಯಬೇಕಾಗಿಲ್ಲ. ಮಂಡ್ಯಕ್ಕೆ ಪ್ಲಾನ್ ಔಟಲೇ 14.97 ಕೋಟಿರೂಪಾಯಿಗಳು. ಆದರೆ ಹಣ ಬಿಡುಗಡೆ ಕೇವಲ 8.88 ಕೋಟಿ ರೂಪಾಯಿಗಳು. ವೆಚ್ಚ ಆಗಿರತಕ್ಕದ್ದು 8.15 ಕೋಟಿ ರೂಪಾಯಿಗಳು. ಇನ್ನು ರಾಯಚೂರು ಜಿಲ್ಲೆಯ ಪ್ಲಾನ್ ಔಟಲೇ 21.31 ಕೋಟಿ ರೂಪಾಯಿಗಳು. ಹಣ ಬಿಡುಗಡೆ ಆಗಿರುವುದು 11.64 ಕೋಟಿ ರೂಪಾಯಿಗಳು. ಆದರೆ ವೆಚ್ಚ ಆಗಿರತಕ್ಕದ್ದು 9.42 ಕೋಟಿ ರೂಪಾಯಿಗಳು. ಹೀಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಲೆಕ್ಕ ಹಾಕಿನೋಡಿದಾಗ ಒಟ್ಟು ಯೋಜನಾ ವೆಚ್ಚದಲ್ಲಿ ಕೇವಲ ಅವರು 60 ಪರ್ಸೆಂಟ್ ಹಣವನ್ನು ಮಾತ್ರ ಬಿಡುಗಡೆ ಮಾಡಿ ಆ 60 ಪರ್ಸೆಂಟ್ ಹಣದಲ್ಲಿ ಕೇವಲ 40 ಪರ್ಸೆಂಟ್ ಹಣವನ್ನು ವೆಚ್ಚ ಮಾಡಿದ್ದಾರೆ. ಇದರಿಂದ 1991–92ನೇ ಸಾಲಿನಲ್ಲಿ ಇವರು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತೋ ಆ ಎಲ್ಲ ಕಾರ್ಯಕ್ರಮಗಳಿಗೆ ಮೋಸ ಮಾಡಿದ್ದೀರಿ. ಇವತ್ತು ಯಾವುದೇ ಕೆಲಸವನ್ನು ಮಾಡುವುದಕ್ಕೆ ಆಗಿಲ್ಲ. ಇದರಿಂದ ರಾಜ್ಯದ ಪ್ರಗತಿ ಹಿಂದಕ್ಕೆ ಹೋಯಿತು. ಈ ಸರ್ಕಾರದ ಕಾರ್ಯನಿರ್ವಹಣೆಯಿಂದ ರಾಜ್ಯದ ಪ್ರಗತಿ ಹಿಂದಕ್ಕೆ ಹೋಯಿತು. ಒಂದು ಮಾತನ್ನು ತಮ್ಮ ಮುಖಾಂತರ ಕೇಳುತ್ತೇನೆ. ಈ ಯೋಜನೆಗೆ ಏನು ಹಣ ನಿಗಧಿ ಮಾಡಿದ್ದೀರೋ ಈ ಹಣ ಎಲ್ಲಿ ಹೋಯಿತು? ಇನ್ನೂ 600 ಕೋಟಿ ರೂಪಾಯಿ ಬೇಕಲ್ಲ ಅದು ಎಲ್ಲಿ ಹೋಯಿತು? 600 ಕೋಟಿ ರೂಪಾಯಿಗಳನ್ನು ಕ್ರೋಢೀಕರಣ ಮಾಡುವುದಕ್ಕೆ ಸಾಧ್ಯ ಇದೆಯೋ ಅಥವಾ ಇಲ್ಲವೋ? ಅಥವಾ ಈ ಯೋಜನೆಗೆ ಹಣವನ್ನು ಯೋಜನೇತ್ತರದಲ್ಲೂ ಕೂಡಾ..... ಯೋಜನೇತ್ತರದಲ್ಲೂ ಕೂಡಾ ಡೆವಲಪ್‌ಮೆಂಟಲ್ ವರ್ಕ್ಸ್ ಇರಬಹುದು. ಅದರ ನಾನ್‌ಡೆವಲಪಮೆಂಟಲ್ ವರ್ಕ್ಸ್‌ಗೆ ಖರ್ಚು ಮಾಡಿದ್ದೀರೇನೋ ಎಂದು ಮಂತ್ರಿಗಳು ತಿಳಿಸಬೇಕಾಗಿದೆ. ಮತ್ತು ಇವತ್ತು ಏನು ಈ ರಾಜ್ಯದ ಹಣಕಾಸಿನ ಸ್ಥಿತಿ ಇದೆ, ಟೋಟಲ್ ಫಿಸಿಕಲ್ ಮೇನೇಜ್‌ಮೆಂಟ್ ಈ ವ್ಯವಸ್ಥೆ ಬಗ್ಗೆ ಸಂಪೂರ್ಣವಾದ ಒಂದು ಶ್ವೇತಪತ್ರವನ್ನು ನೀವು ಕೊಡಬೇಕಾಗುತ್ತದೆ.

ಏಕೆಂದರೆ ಸುಮಾರು 600 ಕೋಟಿ ರೂಪಾಯಿಗಳನ್ನು ನಿಮಗೆ ಕ್ರೋಢೀಕರಣ ಮಾಡುವುದಕ್ಕೆ ಆಗಿಲ್ಲ. ಇದು ಯೋಜನಾ ಹಣ ಇದ್ದಿದ್ದರೆ ಇದು ನಿಗದಿಪಡಿಸಿದಂತಹ ಹಣ ಈ ಹಣ ಎಲ್ಲಿ ಹೋಯಿತು? ಸಂಪನ್ಮೂಲ ಕ್ರೋಢೀಕರಣ ಮಾಡಿದರೋ ಅಥವಾ ಇಲ್ಲವೋ ಅಥವಾ ಬೇರೆ ಬೇರೆ ಕಡೆಯಿಂದ ಸಿಕ್ಕಾಪಟ್ಟೆ ಖರ್ಚು ಮಾಡಿದರೋ ಹೇಗೆ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು. ಅದು ಇಲ್ಲದೆ ಮೊನ್ನೆ ಯೋಜನಾ ಸಚಿವರು ಒಂದು ಮಾತು ಹೇಳಿದರು. 31–3–92 ವರ್ಷದ

ಕೊನೆ ದಿನ ಇದೆ. ಅದನ್ನು ಒಂದು ತಿಂಗಳು ಎಕ್ಸ್‌ಟೆಂಡ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಎಕ್ಸ್‌ಟೆಂಡ್ ಮಾಡಲಿಕ್ಕೆ ಬರುತ್ತದೋ ಹೇಗೆ? ಇದು ಬಹಳ ಆಶ್ಚರ್ಯದ ಮಾತು. ಎಕ್ಸ್‌ಟೆಂಡ್ ಮಾಡಲಿಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಎಂಟನೆಯ ಪಂಚವಾರ್ಷಿಕ ಯೋಜನೆ ನಿನ್ನೆಯಿಂದ ಪ್ರಾರಂಭವಾಯಿತು. ಸ್ಪಿಲ್‌ಓವರ್ ವರ್ಕ್ಸ್ ಆಗುತ್ತವೆ. ಹೀಗಾದರೆ ಎಕ್ಸ್‌ಟೆಂಡ್ ಮಾಡುವುದಕ್ಕೆ ಬರುವುದಿಲ್ಲ. ಈ ಮಾತನ್ನು ಏತಕ್ಕೆ ಹೇಳಿದರೋ ನನಗೆ ಅರ್ಥವಾಗಲಿಲ್ಲ. ದಯವಿಟ್ಟು ಅದರ ಬಗ್ಗೆ ಹೇಳುತ್ತೀರಾ? ಇದರ ಬಗ್ಗೆ ಸವಿಸ್ತಾರವಾಗಿ ಹೇಳಬೇಕೆಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಸರ್ಕಾರಕ್ಕೆ ಯೋಜನೆಗಳ ಬಗ್ಗೆ ಕಾಳಜಿಯಿಲ್ಲ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಈ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿಯ ಬಗ್ಗೆ ಕಾಳಜಿಯಿಲ್ಲ. ಇವರು ಮನಸ್ಸಿಗೆ ಬಂದಹಾಗೆ ಇಪಷ್ಟು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ರಾಜ್ಯದ ಪ್ರಗತಿ ಹಿಂದಕ್ಕೆ ಹೋಗುತ್ತಿದೆ. ರಾಜ್ಯದ ಜನತೆಗೆ ಬಹಳ ದೊಡ್ಡ ಮೋಸ ಮಾಡಿದ್ದಾರೆ. ಇವರ ಕಡೆಯಿಂದ ಹಣಕಾಸಿನ ಕ್ರೋಢೀಕರಣ ಮಾಡಿ ಹಣಕಾಸನ್ನು ಸರಿಯಾದ ವ್ಯವಸ್ಥೆಗೆ ತಂದು ಕೆಲಸ ಮಾಡುವುದಕ್ಕೆ ಆಗಲಿಲ್ಲ. ಹೀಗಾಗಿ ಹಣವನ್ನು ಖರ್ಚು ಮಾಡುವುದಕ್ಕೆ ಆಗಿಲ್ಲವೆಂದು ಹೇಳುವುದಕ್ಕೆ ವಿಧಿಯಿಲ್ಲ. ಅದರ ಬಗ್ಗೆ ಸಹ ಸವಿಸ್ತಾರವಾಗಿ ಹೇಳಬೇಕು. ಇನ್ನೊಂದು ಮಾತನ್ನು ಹೇಳುತ್ತೇನೆ, ಯಾವಾಗ ನೀವು ಯೋಜನಾ ವೆಚ್ಚದಲ್ಲಿ 1555 ಕೋಟಿ ರೂಪಾಯಿಗಳನ್ನು ತಾವೇನು ನಿಗದಿಪಡಿಸಿದ್ದೀರಿ. ಹಾಗೆ ನಿಗದಿಪಡಿಸಿದ ಮೇಲೆ ನಿಮ್ಮಿಂದ ಹಣವನ್ನು ಕ್ರೋಢೀಕರಣ ಮಾಡುವುದಕ್ಕೆ ಆಗದಿದ್ದ ಪರ್ಷದಲ್ಲಿ ಪ್ಲಾನ್‌ಸೈಜ್ ಕಟ್‌ಮಾಡಬೇಕಾಗಿತ್ತು . ಇವರು ಪ್ಲಾನ್‌ಸೈಜ್ ಕೂಡ ಕಟ್. ಮಾಡಲಿಲ್ಲ. ಪ್ಲಾನ್‌ಸೈಜ್ ಕಟಿಂಗ್ ಬಗ್ಗೆ ನೀವು ಹೇಳಲೇ ಇಲ್ಲ. ಯೋಜನೆಯ ಬಗ್ಗೆ ತಾವೇನೂ ಹೇಳಿಕೊಳ್ಳುತ್ತಾ ಇದ್ದೀರಿ ಅದನ್ನು ದಯವಿಟ್ಟು ಕೈಬಿಡಿ. ಏತಕ್ಕೆ ಈ ಮಾತನ್ನು ಹೇಳುತ್ತಾ ಇದ್ದೀರಿ? ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಮಗೆ ಕೇಂದ್ರಸರ್ಕಾರದ ಯೋಜನಾ ಆಯೋಗದಿಂದ ಪ್ರಶಸ್ತಿ ಪತ್ರ ಬಂದಿದೆ, ನಾವು ಹಣಕಾಸು ಕ್ರೋಢೀಕರಿಸಿದ್ದೇವೆ. ಒಳ್ಳೆಯ ಯೋಜನೆಗಳನ್ನು ರೂಪಿಸಿದ್ದೇವೆ ಅದಕ್ಕಾಗಿ ನಮಗೆ ಪ್ರಶಸ್ತಿ ಪತ್ರ ಬಂದಿದೆಯೆಂದು ದಯವಿಟ್ಟು ತಾವೂ ತಮ್ಮ ಆತ್ಮಶೋಧನೆ ಮಾಡಿಕೊಳ್ಳಿ. ಅದರ ಜೊತೆಗೆ ಈ ವರ್ಷ ಎಂಟನೆಯ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದಲ್ಲಿ 2115 ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಮೀಸಲಾಗಿಟ್ಟಿದ್ದೇವೆ ಸುಮಾರು 46 ಪರ್ಸೆಂಟ್ ನಷ್ಟು ಹೆಚ್ಚು ಹಣವನ್ನು ಶೇಖರಣೆ ಮಾಡಿಕೊಂಡಿದ್ದೇವೆಂದು ಹೇಳಿಕೊಳ್ಳುತ್ತಾ ಇದ್ದೀರಿ. ನನಗೆ ಸಂಶಯವಿದೆ. ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳ ಮೇಲೆ ನಿಮ್ಮಿಂದ ಕ್ರೋಢೀಕರಣ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮಿಂದ ಯೋಜನೆಯ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಸವಿಸ್ತಾರವಾದ ಒಂದು ಶ್ವೇತಪತ್ರವನ್ನು ಹೊರಡಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :(ಯೋಜನೆ, ಸಾಂಸ್ಥಿಕ ಹಣಕಾಸು ಸಚಿವರು) ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಚಂದ್ರೇಗೌಡರು ಮತ್ತು ಬಸವರಾಜರಾಯ ರೆಡ್ಡಿಯವರು ನಮ್ಮಗಳಿಗೆ ಬಹಳ ಚೆನ್ನಾಗಿ ಬುದ್ಧಿಯನ್ನು ಹೇಳಿ, ನಿಮಗೆ ಯೋಗ್ಯತೆಯಿಲ್ಲ, ನಿಮಗೆ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಈ ದೇಶಕ್ಕೆ ದ್ರೋಹ ಮಾಡಿದ್ದೀರಿ, ಜನಗಳಿಗೆ ಮೋಸ ಮಾಡಿದ್ದೀರಿ ಹಾಗೆಂದು ಕೆಲವು ಪದಗಳನ್ನು ಹೇಳಿದರು. ನಾವು ಯೋಜನಾ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಲಿಲ್ಲ, ನಾವು ಪ್ಲಾನ್‌ಸೈಸ್ ಕಟ್‌ಮಾಡಿಕೊಳ್ಳಲಿಲ್ಲವೆಂದು ಬಹಳ ದುಃಖದಿಂದ ಹೇಳಿದರು. 1987 ರಲ್ಲಿ ಒರಿಜನಲ್ ಪ್ಲಾನ್‌ಔಟ್‌ಲೇ 917 ಕೋಟಿ ಇತ್ತು. ಇವರು ಖರ್ಚು ಮಾಡಿರುವುದು 769.45 ಕೋಟಿ. 1988–89ರಲ್ಲಿ ಪ್ಲಾನ್ ಔಟ್‌ಲೇ 900 ಕೋಟಿ ರೂಪಾಯಿ. ಇವರು ಖರ್ಚು ಮಾಡಿರುವುದು 800 ಕೋಟಿ. ಆದೇರೀತಿಯಲ್ಲಿ 1989–90ರಲ್ಲಿ 1040 ಕೋಟಿ ಇತ್ತು, ಇವರು ಖರ್ಚು ಮಾಡಿರುವುದು 870 ಕೋಟಿ. ಇದು ಎಲ್ಲವನ್ನು ಕೇಂದ್ರಸರ್ಕಾರವನ್ನು ಕೇಳಿ ಕಟ್ ಮಾಡಿಕೊಂಡಿರುವುದು, ಅದೇ ತರಹ ನಾವು ಸಹ ಮಾಡಬೇಕೆಂದು ಅವರ ಅಭಿಪ್ರಾಯವಿದೆ. ಆದರೆ ನಮ್ಮ ಬಜೆಟೆಡ್ ಎಸ್ಟಿಮೇಟ್. 1990–91ರಲ್ಲಿ 1145 ಕೋಟಿ. ಆದರಲ್ಲಿ ಖರ್ಚು ಮಾಡಿರುವುದು 1326 ಕೋಟಿ. ಎಷ್ಟು

ಜಾಸ್ತಿಯಾಗಿದೆಯೆನ್ನುವುದನ್ನು ತಾವೇ ನೋಡಿ. 1992ರಲ್ಲಿ 1558 ಕೋಟಿ ಬಜೆಟೆಡ್ ಎಸ್ಟಿಮೇಟ್ ಈಗಾಗಲೇ ಅದೆಲ್ಲವನ್ನು ಖರ್ಚು ಮಾಡುತ್ತೇವೆಂದು ಹೇಳಿಬಿಟ್ಟಿದ್ದೇವೆ ನಮಗೆ ಆ ನಂಬಿಕೆಯಿದೆ. ನಾವು ಅಂಟಿಸಿಪೇಟ್ ಮಾಡುತ್ತಾ ಇದ್ದೇವೆ. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ 82 ಡಿಪಾರ್ಟ್‌ಮೆಂಟ್‌ಗಳಿವೆ. 56 ಗೌರ್ನಮೆಂಟ್ ಅಂಡರ್‌ಟೇಕಿಂಗ್ ಕಾರ್ಪೊರೇಷನ್ಸ್‌ಗಳಿವೆ. 20 ಜಿಲ್ಲೆಗಳಲ್ಲಿ ಮಂಡಲಗಳ ಮುಖಾಂತರ ಕೆಲಸ ನಡೆಯಬೇಕು. ಮತ್ತು ಮಾಹಿತಿಯನ್ನು ಅಲ್ಲಿಂದಲೇ ತರಿಸಬೇಕು. ಇದರಲ್ಲಿ ಪ್ರೋಗ್ರಾಮ್‌ಗಳು ಎಷ್ಟಿವೆ ಅಂದರೆ 1643 ಸ್ಕೀಮ್‌ಗಳಿವೆ. ಆ ಸ್ಕೀಮ್‌ಗಳಲ್ಲಿ ಅನೇಕ ತರಹದ ಕಾಮಗಾರಿಗಳು ನಡೆಯುತ್ತಿವೆ. ಅವು ನಡೆದುಕೊಂಡು ಹೋಗುತ್ತಿರುತ್ತವೆ. ಅನೇಕ ತರಹ ಕಾಮಗಾರಿಗಳು ನಡೀತಾ ಇರ್ತವೆ, ನಡ್ಕೊಂಡು ಹೋಗ್ತಾ ಇರ್ತವೆ ಅವರು ಹೇಳಿದರು ನಿನ್ನೆಯಿಂದ ಬೇರೆ ಪ್ಲಾನ್ ಶುರುವಾಯಿತು, ಜನವರಿವರೆಗೆ ಲೆಕ್ಕ ಕೊಟ್ಟಿದ್ದೀರಿ, ಇನ್ನು ಎರಡು–ಮೂರು ತಿಂಗಳಲ್ಲಿ ನೀವು ಹೇಗೆ ಖರ್ಚು ಮಾಡುತ್ತೀರಿ ಅಂತ. ಆವಾಗಲೂ ಎರಡು–ಮೂರು ತಿಂಗಳಲ್ಲಿ ಖರ್ಚುಮಾಡಿಲ್ಲ. ಈವಾಗಲೂ ಖರ್ಚುಮಾಡುವುದಿಲ್ಲ. ಜನವರಿ 31ರವರೆಗೆ ಖರ್ಚು ಮಾಡುವುದಕ್ಕೆ ನೀವು ಅರ್ಥಮಂತ್ರಿಯಾದರೂ ಸಾಧ್ಯವಿಲ್ಲ. ಯಾರು ಅರ್ಥಮಂತ್ರಿಯಾದರೂ ಅದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಬಿಲ್ಸ್ ಪೇ ಮಾಡುತ್ತಾ ಹೋಗುತ್ತೇವೆ. ಈ ಕಾಮಗಾರಿಗಳು ನಡೆಯುತ್ತಲೇ ಇರುತ್ತವೆ. ಎಲ್ಲಾ ಕಡೆಯಿಂದ ಮಾಹಿತಿ ಬರಬೇಕಾದರೆ ಮೇ ಕೊನೆಯಲ್ಲಿ ಮಾಹಿತಿ ದೊರೆಯುತ್ತದೆಯೇ ಹೊರತು ಮಾರ್ಚ್‌ನಲ್ಲಿ ದೊರೆಯುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :– ದುಡ್ಡು ಎಷ್ಟು ಕೊಟ್ಟಿದ್ದಾರೆ ಎನ್ನುವುದರ ಮೇಲೆ ನಮಗೆ ಗೊತ್ತಾಗುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :– ದಯವಿಟ್ಟು ಕುಳಿತುಕೊಳ್ಳಿ. ನಾನು ಮಾತನಾಡಿ ಮುಗಿಸಿದಮೇಲೆ ನೀವು ಮಾತನಾಡಿ. ನೀವು ಬಹಳ ಹೇಳಿಬಿಟ್ಟಿರಲ್ಲ. ನಾವು ಜನರಿಗೆ ಮೋಸ ಮಾಡಿದ್ದೇವೆ. ನಮಗೆ ಯೋಗ್ಯತೆ ಇಲ್ಲ ಅಂದಿರಿ. ನಮ್ಮ ಯೋಗ್ಯತೆ ಏನಿದೆ ಅಂತ ನಾನು ಹೇಳುತ್ತೇನೆ. 1987–88ರಲ್ಲಿ ಬಜೆಟೆಡ್ ಎಸ್ಟಿಮೇಟ್ 917 ಕೋಟಿ ಇತ್ತು. ಜನವರಿವರೆಗೆ ಖರ್ಚು ಮಾಡಿದ್ದು 420 ಕೋಟಿ. ಅಲ್ಲಿಗೆ 46 ಪರ್ಸೆಂಟ್ ಆಯಿತು. 1988–89ರಲ್ಲಿ 900 ಕೋಟಿ ಇದ್ದದ್ದು, ಎಕ್ಸ್‌ಪೆಂಡಿಚರ್ 486 ಕೋಟಿ. ಅಲ್ಲಿಗೆ 54 ಪರ್ಸೆಂಟ್ ಆಯಿತು. 1989–90ರಲ್ಲಿ 1040 ಕೋಟಿ ಇದ್ದದ್ದು, 634 ಕೋಟಿ ಖರ್ಚಾಗಿದೆ. ಅದು 61 ಪರ್ಸೆಂಟ್ ಆಯಿತು. ಇದೆಲ್ಲ ಏನು, ಹೋಗ್ಬಿಟ್ಟು ಅಲ್ಲಿ ನಮ್ಮ ಕೈಯಲ್ಲಿ ಹರಿಯಿಲ್ಲ, ನಮ್ಮ ಹತ್ತಿರ ದುಡ್ಡಿಲ್ಲ, ಕಟ್‌ಮಾಡಿ ನಮ್ಮ ಔಟಲೇ ಅಂತ ಮಾಡಿಕೊಂಡಿರೋದು ಇದಲ್ಲ. 1990–91ರಲ್ಲಿ ಹಾಗಾಗಿಲ್ಲ. 1145 ಕೋಟಿ ರೂಪಾಯಿ ಇದ್ದದ್ದು ಜನವರಿ ವರೆಗೆ 644 ಕೋಟಿ ಖರ್ಚುಮಾಡಿರುವುದರಿಂದ ಅದು 58 ಪರ್ಸೆಂಟ್ ಆಗಿದೆ. ಇನ್ನೂ ಜಾಸ್ತಿ ಖರ್ಚುಮಾಡಿದ್ದೇವೆ, 1326 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ನಮ್ಮ ಯೋಗ್ಯತೆ ಇಷ್ಟು ಮೇಲಕ್ಕೆ ಹೋಯಿತು. 1991–92ರಲ್ಲಿ ನಮ್ಮದು ಔಟಲೇ ಇರುವುದು 1558 ಕೋಟಿ. ಇಷ್ಟು ಹೊತ್ತಿಗಾಗಲೇ 980 ಕೋಟಿ ಖರ್ಚು ಮಾಡಿದ್ದೇವೆ. ಅಲ್ಲಿಗೆ 63 ಪರ್ಸೆಂಟ್ ಆಗಿದೆ. ಇನ್ನು 578 ಕೋಟಿ ಉಳಿದಿರುವುದು. ಏಕೆ ಖರ್ಚುಮಾಡುವುದಿಲ್ಲ ನಾವು 578 ಕೋಟಿಗೆ ಕೊಡಬೇಕಾದ ಬೆಲೆಗಳಿವೆ. ಬೇಕಾದಷ್ಟು ಸಾಮಾನು, ಸರಂಜಾಮುಗಳನ್ನು ತೆಗೆದುಕೊಳ್ಳುವುದಕ್ಕೆ ದುಡ್ಡು ಕೊಡಬೇಕಾದದ್ದು ಇದೆ. ಇದು ಎಲ್ಲದಕ್ಕೂ ಖಂಡಿತ ಖರ್ಚು ಮಾಡುತ್ತೇವೆ. ಇನ್ನೂ ಜಾಸ್ತಿ ಖರ್ಚುಮಾಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ :– ಹೇಗೆ ಮಾಡುತ್ತೀರಿ?

ಶ್ರೀ ಕೆ.ಎಸ್ ನಾಗರತ್ನಮ್ಮ :– ಬರುವ ವರ್ಷ ಕಾದು ನೋಡಿ. ಹೇಗೆ ಖರ್ಚು ಮಾಡುತ್ತೇವೆ. ಎಂದು ನಾನು ಹೇಳುತ್ತೇನೆ. ಈ ಪ್ರೋಗ್ರಾಮ್ಸ್ ಎಲ್ಲ ಡಿಸ್ಟ್ರಿಕ್ಟ್ ಸೆಕ್ಟರ್ ಔಟಲೇನಲ್ಲಿ ಮತ್ತೇ ಇದೆಲ್ಲ ಬರಬೇಕಾದರೆ 1990–91 ರಲ್ಲಿ 51 ಪರ್ಸೆಂಟ್ ಆಯಿತು. ಜಿಲ್ಲಾ ಪರಿಷತ್ ಪ್ರೋಗ್ರಾಮ್‌ಗಳ ಬಗ್ಗೆ ಅವರು ನಿನ್ನೆ ದಿವಸ ಹೇಳುತ್ತಿದ್ದರು, ನಮಗೂ ಇದಕ್ಕೂ ಸಂಬಂಧ ಇಲ್ಲ ಎಂದು. ನಮ್ಮ ಪ್ರೋಗ್ರಾಮ್ಸ್ ಇಲ್ಲ ರೋಡ್ಸ್, ಸ್ಕೂಲ್, ಬಿಲ್ಡಿಂಗ್ಸ್, ರೂರಲ್ ವಾಟರ್ ಸಪ್ಲೈ ಹೆಲ್ತ್ ಇನ್‌ಫ್ರಾಸ್ಟ್ರಕ್ಚರ್ ಇದೆಲ್ಲ ಈ

ಸಲ ಅಂತೂ ಶುರುವಾದದ್ದು ಬಹಳ ಲೇಟಾಗಿ. ಮಳೆ ಬಂದು ಶುರುವಾದದ್ದೇ ಲೇಟ್‌ಆಯಿತು ಹೀಗಾಗಿ ಕೆಲಸಗಳು ಬೇಕಾದಷ್ಟು ನಡೆದಿದೆ. ಬೇಕಾದಷ್ಟು ದುಡ್ಡು ಕೊಟ್ಟಿದ್ದೇವೆ. ಅದು ಖರ್ಚಾಗಬೇಕಾಗಿರುವುದನ್ನು, ಮಾನ್ಯ ಅಧ್ಯಕ್ಷರು ಬರುವ ತಿಂಗಳು ಅಧಿವೇಶನ ಕರೆಯುತ್ತಾರೆ ಎಂದು ಕಾಣುತ್ತದೆ. ಆಗ ಇನ್ನೊಂದು ಪ್ರಶ್ನೆ ಸಾಕಿದರೆ ನಾನು ಹೇಳುತ್ತೇನೆ. ಆಮೇಲೆ ನಮ್ಮ ಸ್ಟೇಟ್ ಪ್ಲಾನ್‌ನಲ್ಲಿ ಜಿಲ್ಲಾಪರಿಷತ್‌ನಲ್ಲಿ ಜನವರಿ 1991–92ವರಗೆ 203ಕೋಟಿ ಕೊಟ್ಟಿದ್ದೇವೆ. ಫೆಬ್ರವರಿ ತಿಂಗಳಲ್ಲಿ 65 ಕೋಟಿ ಕೊಟ್ಟಿದ್ದೇವೆ.

ಡ್ಯೂರಿಂಗ್ ಮಾರ್ಚ್ ಅಂದರೆ, ಒಂದೇಸಾರಿ ಕೊಟ್ಟಿಲ್ಲ, ಹಂತಹಂತವಾಗಿ, 47 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಒಟ್ಟು ನಾವು 315 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಜಡ್.ಪಿ. ಗೆ ಇನ್ನೂ ಜಾಸ್ತಿ ದುಡ್ಡು ಕೊಡಬೇಕಾಗಿಲ್ಲ. ಏಕಂದರೆ, ಅನ್‌ಸ್ಪೆಂಟ್ ಮನಿ ಜಡ್. ಪಿ. ನಲ್ಲಿದೆ. 45 ಕೋಟಿ ರೂಪಾಯಿ ಅನ್‌ಸ್ಪೆಂಟ್ ಮನಿ ಇದೆ. ಅವರು ಆ ದುಡ್ಡು ಖರ್ಚು ಮಾಡಿದರೆ ಸಾಕಾಗುತ್ತದೆ. ಆ ದುಡ್ಡು ಇರುವುದರಿಂದ, ನಾವು ಅವರಿಗೆ ಇನ್ನೂ ಜಾಸ್ತಿ ದುಡ್ಡು ಕೊಡಬೇಕಾಗಿಲ್ಲ. ಅವರಿಗೆ, ಅವರ ಹತ್ತಿರ ಇರತಕ್ಕ ದುಡ್ಡಿನಲ್ಲಿಯೇ ಉಳಿಯುತ್ತದೆ. ಈಗ ಈ ದುಡ್ಡಿನಲ್ಲಿ 11 ಕೋಟಿ ರೂಪಾಯಿ ಸೆಂಟ್ರಲ್ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್‌ನಲ್ಲಿ ಕಟ್ ಆಗಿದೆ. ನಾವು, ನಮ್ಮ ಪೇರನ್ನು ಜಡ್.ಪಿ.ಗೆ ಕೊಡಬೇಕಾಗಿಲ್ಲ. ಮತ್ತು ಉಳಿದಿರುವ 32 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುವ ಅವಶ್ಯಕತೆಯೂ ಇಲ್ಲ, because they have got unspent money. ಹೀಗಾಗಿ, ಇನ್ನೊಂದು ಹೇಳಿದರು. ಹೋದಸಾರಿ ಜೀವರಾಜ ಆಳ್ವರವರು ಹೇಳಿದರು, ನಿಮ್ಮ ಹತ್ತಿರ, ಸಾದಿಲ್ವಾರು ಫಂಡ್‌ನಲ್ಲಿ 90 ಕೋಟಿ ರೂಪಾಯಿ ಇತ್ತು ಈಗತಾನೆ ಅದನ್ನು 500 ಕೋಟಿ ಮಾಡಿಕೊಂಡಿದ್ದೀರಿ, ಇಷ್ಟು ಬಂದರೂ, ನೀವು ಇದನ್ನು ಖರ್ಚು ಮಾಡುವುದಕ್ಕೆ ಮಾಡಿಕೊಂಡಿದ್ದೀರಿ, ಎಂದು ಹೇಳಿದರು. ಹೌದು, ಸಾದಿಲ್ವಾರು ಫಂಡ್‌ನಲ್ಲಿ ದುಡ್ಡು ಮಾಡಿದ್ದೇವೆ. ಆದರೆ, ಅದನ್ನು ಏತಕ್ಕೆ ಕೊಟ್ಟಿದ್ದೇವೆ, ಕೆ.ಇ.ಬಿ.ಗೆ ಕೊಟ್ಟಿದ್ದೇವೆ, ಕೆ.ಎಸ್.ಆರ್.ಟಿ.ಸಿ.ಗೆ ಕೊಟ್ಟಿದ್ದೇವೆ, ಕೋ–ಆಪರೇಟಿವ್ಸ್‌ಗೆ ಕೊಟ್ಟಿದ್ದೇವೆ. ಇವೆಲ್ಲವೂ ಸೇರಿದೆ., ನಮ್ಮ ಪ್ಲಾನ್ ಔಟ್‌ಲೇ ಇನ್ನೂ ಜಾಸ್ತಿಯಾಗುತ್ತದೆ. 1,558 ಕೋಟಿ ರೂಪಾಯಿ ಪ್ಲಸ್ ಸಾದಿಲ್ವಾರು ಫಂಡ್‌ನಿಂದ ಕೊಟ್ಟಿರುವುದು. ಹೀಗಾಗಿ, ನಮ್ಮ ಪ್ಲಾನ್ ಔಟ್‌ಲೇನಲ್ಲಿ ದುಡ್ಡು ಜಾಸ್ತಿಯಾಗುತ್ತದೆ. ಮತ್ತು ನಮ್ಮ ಸ್ಕೀಮ್ಸ್ ಕೂಡ ಜಾಸ್ತಿಯಾಗುತ್ತವೆ. ಹೀಗಾಗಿ ನಾವು ಜನಕ್ಕೆ ಮೋಸಾನೂ ಮಾಡಿಲ್ಲ, ನಾವು ಜನಕ್ಕೆ ಅನ್ಯಾಯಾನೂ ಮಾಡಿಲ್ಲ. ನಮ್ಮ ಪ್ಲಾನಿಂಗ್ ಚೆನ್ನಾಗಿ ನಡೆದಿದೆ, ನಮ್ಮ ಪ್ಲಾನ್ ಪ್ರಕಾರ ನಾವು ಹಣವನ್ನು ಪೂರೈಸುತ್ತೇವೆ, ನಾವು ಎಲ್ಲಾ ದುಡ್ಡು ಖರ್ಚುಮಾಡುತ್ತೇವೆ. ನಿಮ್ಮಹಾಗ ಹೋಗಿ, ಹೋಗಿ ಕಟ್ ಮಾಡಿಸಿಕೊಂಡು ಬಂದಿಲ್ಲ, ನಮ್ಮ ಕೈಲಿ ಆಗುವುದಿಲ್ಲ, ನಮ್ಮ ಹತ್ತಿರ ರಿಸೋರ್ಸ್ ಇಲ್ಲವೆಂದು, ನಾವು ಹೋಗಿ ಕಟ್ ಮಾಡಿಸಿಕೊಂಡು ಬಂದಿಲ್ಲ. ಈ ದುಡ್ಡು ನಮಗೆ ಹೇಗೆ ಬಂತು ಎಂದರೆ, ನಮ್ಮ ಫೈನಾನ್ಸ್‌ನವರು ಹೇಳುತ್ತಾರೆ, 210 ಕೋಟಿ ರೂಪಾಯಿ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಹೆಚ್ಚಾಗಿ ಬಂದಿದೆ, 25 ಕೋಟಿ ಟ್ರಾನ್ಸ್‌ಪೋರ್ಟ್ ಸರ್ವೀಸ್‌ನಿಂದ ಹೆಚ್ಚಾಗಿ ಬಂದಿದೆ, 10 ಕೋಟಿ ಸ್ಟಾಂಪ್ ಡ್ಯೂಟಿಯಿಂದ ಬಂದಿದೆ. ಇನ್ನೂ ಅನೇಕ ವಿಧದಲ್ಲಿ ಜಾಸ್ತಿ ದುಡ್ಡು ಬಂದಿದೆ. ರಿಸೋರ್ಸ್ ಮೊಬಲೈಸೇಷನ್ ಚೆನ್ನಾಗಿ ಆಗಿದೆಯೆಂದು ಫೈನಾನ್ಸ್‌ನವರು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಅಡಿಷನಲ್ ರಿಸೋರ್ಸ್ ಮೊಬಲೈಸೇಷನ್ 10 ಕೋಟಿ ಮಾಡುತ್ತೇವೆಂದು ಹೇಳಿದಿರಿ ಈಗ ಎಷ್ಟು ಮಾಡಿದ್ದೀರಿ?

ಶ್ರೀಮತಿ ಕೆ.ಎಸ್ ನಾಗರತ್ನಮ್ಮ :– ಎಕ್ಸೈಸ್‌ನಿಂದ ನಮಗೆ ಜಾಸ್ತಿ ದುಡ್ಡು ಬಂದಿದೆ ಎಂದು ಹೇಳುತ್ತಿದ್ದಾರೆ, ಮೈನ್ಸ್ ಅಂಡ್ ಜುಯಾಲಜಿಯಿಂದ ಜಾಸ್ತಿ ಬಂದಿದೆ ಎಂದು ಹೇಳುತ್ತಿದ್ದಾರೆ, ಇದೆಲ್ಲವೂ ನಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿದೆ.

ಶ್ರೀ ಬಸವರಾಜ ರಾಯರೆಡ್ಡಿ :– ಈ ರೀತಿ ಹೇಳಿದರೆ ಆಗುವುದಿಲ್ಲ ಇದರ ಬಗ್ಗೆ ಒಂದು ಶ್ವೇತಪತ್ರ ಹೊರಡಿಸಿ. . .

ಶ್ರೀಮತಿ ಕೆ.ಎಸ್ ನಾಗರತ್ನಮ್ಮ :– ನಾವು ಶ್ವೇತಪತ್ರವನ್ನು ಏಕೆ ಹೊರಡಿಸಬೇಕು, ನಾವು ನಿಮ್ಮಹಾಗೆ, ಹೋಗಿ, ಹೋಗಿ, ಪ್ಲಾನ್ ಇದ್ದು, ರಿಸೋರ್ಸ್ ಇಲ್ಲ, ಕಟ್ ಮಾಡಿ, ಕಟ್ ಮಾಡಿ ಎಂದು ಹೇಳಿ ಬಂದಿದ್ದೇವೆಯೇ? ನಮಗೆ ನಂಬಿಕೆ ಇದೆ, ನಿಮಗೆ ಮಾತನಾಡುವುದಕ್ಕೆ ಬರದೇ, ಮೋಸ ಮಾಡಿದ್ದೀರಿ, ಜನಗಳಿಗೆ ಮೋಸ ಮಾಡಿದ್ದೀರಿ ಎಂದು ಹೇಳುತ್ತೀರಿ ಹೊರತು, ಇದರಲ್ಲಿ ಮೋಸಾನೂ ಇಲ್ಲ, ಧಗಾಬಾಜೀನೂ ಇಲ್ಲ. ನಮ್ಮ ಹತ್ತಿರ ದುಡ್ಡು ಇದೆ, ಖರ್ಚುಮಾಡುತ್ತೇವೆ, ಜನಗಳಿಗೆ ಅನುಕೂಲ ಮಾಡಿಕೊಡುತ್ತೇವೆ. ದಯವಿಟ್ಟು ಮಾನ್ಯ ಬನ್ನಿಕೋಡ್‌ರವರು ಸ್ಕ್ರಿಂಗ್ ತರಹ ಮೇಲೆ ಏಳಬಾರದು, ಅವರು ಎಲ್ಲಾದಕ್ಕೂ ನಾನೇ ಸರ್ವಜ್ಞ ಎನ್ನುವ ರೀತಿಯಲ್ಲಿ ಎದ್ದುನಿಂತುಕೊಳ್ಳುತ್ತಾರೆ, ಅವರಿಗೆ ನಾನು ಜವಾಬು ಹೇಳುವುದಿಲ್ಲ. ಹೀಗಾಗಿ ಸುಮ್ಮಸುಮ್ಮನಾದರೂ ಮೋಸ ಮಾಡಿದ್ದಾರೆ. ಮೋಸ ಮಾಡಿದ್ದಾರೆಂದು ಹೇಳುವುದಕ್ಕೋಸ್ಕರ ಇದನ್ನು ಚರ್ಚೆಗೆ ತಗೆದುಕೊಂಡು ಬಂದಿದ್ದಾರೆ. ಇದರಲ್ಲಿ ಯಾವುದೇ ಮೋಸ ಆಗಿಲ್ಲವೆಂದು ಹೇಳಿ, ಈಗಾಗಲೇ 4 ಗಂಟೆಯಾಗುತ್ತಿದೆ, ನಮಗೆಲ್ಲಾ ಹಸಿವು ಆಗಿದೆ, ಅವರೆಲ್ಲರೂ ಹೋಗಿ ಊಟ ಮಾಡಿ ಬಂದಿದ್ದಾರೆ, ನಾವು ಊಟಕ್ಕೆ ಹೋಗಬೇಕಾಗಿದೆ. ಅವರೆಲ್ಲರಿಗೂ ಮುಂದಿನ ವರ್ಷದ ಅಂಗೀರಸನಾಮ ಸಂವತ್ಸರದ ಹಾಗೂ ಯುಗಾದಿ ಹಬ್ಬದ ಶುಭಾಶಯಗಳನ್ನು ಹೇಳಿ, ನಿಮಗೆಲ್ಲರಿಗೂ ಈ ಉತ್ತರದಿಂದ ಸಮಾಧಾನವಾಗಿದೆ ಎಂದು ತಿಳಿದುಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :– ಮಾನ್ಯ ಅಧ್ಯಕ್ಷರೇ. . .

ಅಧ್ಯಕ್ಷರು :– ನಿಮಗೆ ಉತ್ತರ ಹೇಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆಮೇಲೆ ರಾಯರೆಡ್ಡಿಯವರು ಶ್ವೇತಪತ್ರ, ಶ್ವೇತಪತ್ರ ಎಂದು ಹೇಳಿದರು, ಅವರು ಬಿಳಿ ಕಾಗದದಿಂದಲೇ ಓದುತ್ತಾ ಇದ್ದಾರೆ, ಅದರಲ್ಲಿ ಕಪ್ಪು ಇಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಹಣ ಖರ್ಚಾಗಿಲ್ಲ ಅದಕ್ಕಾಗಿ ಅವರು ನನ್ನ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ :–ದಯಮಾಡಿ ಕ್ಷಮಿಸಬೇಕು, ಅವರು ಬಹಳ ಹಗುರವಾಗಿ ಉತ್ತರವನ್ನು ಹೇಳಿದ್ದಾರೆ, ಬೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ರಾಯರೆಡ್ಡಿಯವರೇ, ಬಹಳ ತೂಕವಾಗಿ ಉತ್ತರ ಕೊಟ್ಟಿದ್ದಾರೆ. ಅವರು ಹಗುರವಾಗಿ ಕೊಟ್ಟಿಲ್ಲ. ಏತಕ್ಕೆಂದು ಹೇಳಿದರೆ ಅವರು ಫಿಗರ್ಸ್ ಕೋಟ್ ಮಾಡಿರುತ್ತಾರೆ ಅವರು 1977–78; 1978–79, 1989–90, 1990–91, 1991–92ನೇ ಸಾಲಿನ ಫಿಗರ್ಸ್ ಕೋಟ್ ಮಾಡಿರುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ ಒಂದು ಅವಕಾಶ ಕೊಡಿ ಸನ್ಮಾನ್ಯ ಸಚಿವರು ಹೇಳಿದ್ದಾರೆ, ಜಿಲ್ಲಾ ಪರಿಷತ್‌ನಲ್ಲಿ ಈಗ 5 ಕೋಟಿ ಖರ್ಚಾಗದೇ ಹಾಗೇ ಉಳಿದಿದೆ, ಅದೇ ರೀತಿ 11 ಕೋಟಿ ಸೆಂಟ್ರಲ್ ಸ್ಪಾನಸರ್ಡ್ ಸ್ಕೀಮ್ಸ್ ಹಣ ಹಾಗೇ ಉಳಿದಿದೆ ಎಂದು ಹೇಳಿದ್ದಾರೆ, ಹಾಗೆ ಉಳಿಯುವುದಕ್ಕೆ ಸಾಧ್ಯವಿಲ್ಲ. ಅದು ಲ್ಯಾಂಪ್ಸ್ ಆಗಿ ಹೋಯಿತು, ಅದೇ ನಾನು ಹೇಳುತ್ತಿರುವ ವಿಚಾರ. ಆಮೇಲೆ 600 ಕೋಟಿ ಮೊಬಲೈಸ್ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಮೊಬಲೈಸ್ ಮಾಡುವುದಕ್ಕೆ ಆಗಲಿಲ್ಲ. They are not able to mobilise Rs. 600 crores, that is my point.

ಶ್ರೀ ಕೆ.ಎಚ್. ರಂಗನಾಥ್ : ನಾಳೆ ಇಲ್ಲ ನಾಡಿದ್ದು ಅಂಗೀರಸ ನಾಮ ಸಂವತ್ಸರ ಬರುತ್ತದೆ, ಆಗ ನೋಡಿಕೊಳ್ಳೋಣ, ಈಗ ಏತಕ್ಕೆ? ಈಗ 4 ಘಂಟೆ ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ : ಇದರ ಬಗ್ಗೆ ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ಶ್ವೇತಪತ್ರ ಬೇಕೋ ಬೇಡವೋ ಹೇಳಿ, ಬೇಡ

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಧ್ಯಕ್ಷರೇ, ಇಡೀ ವರ್ಷದಲ್ಲಿ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗೆ ಬಜೆಟ್ ಸಿಕ್ಕಿಲ್ಲ. ಮಾರ್ಚ್‌ರವರೆಗೆ ಹಣ ಕೊಟ್ಟಿಲ್ಲ. ಮಾರ್ಚ್ 27ಕ್ಕೆ ಹಣ ಬಿಡುಗಡೆ ಮಾಡಿ ಹಣ ಹಾಗೇ ಉಳಿದುಕೊಂಡಿದೆ. ಕುಡಿಯುವ ನೀರಿನ ಕೆಲಸ, ರಸ್ತೆ ಕೆಲಸ ಸ್ಥಗಿತವಾಗಿದೆ, ಯಾವುದೇ ಅಭಿವೃದ್ಧಿ ಕೆಲಸ ಆಗಿಲ್ಲ. ಹಣ ಉಳಿದಿದೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಅದಕ್ಕೋಸ್ಕರ ಪ್ರಶ್ನೆ ಕಳುಹಿಸಿ

ಶ್ರೀ ವಾಟಾಳ್ ನಾಗರಾಜ್ : ತಾವು ಅನೇಕ ತೀರ್ಪುಗಳನ್ನು ಕಾದಿರಿಸಿದ್ದೀರಿ. ಮುಂದಿನ ಸಭೆಯಲ್ಲಿ ಕೊಡುತ್ತೇನೆಂದು ಹೇಳಿದ್ದೀರಿ. ತಾವೇ ಬಂದು ಮುಂದಿನ ಸಭೆಯಲ್ಲಿ ತೀರ್ಪನ್ನು ಕೊಡಬೇಕು ಎಂದು ಹೇಳುತ್ತಾ ಯುಗಾದಿ ಶುಭಾಶಯಗಳನ್ನು ಅರ್ಪಿಸುತ್ತಾ, ತಾವೇ ಈ ಪೀಠದಲ್ಲಿ ಕುಳಿತು ತೀರ್ಪುಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಇದಕ್ಕಿಂತ ಒಳ್ಳೆಯ ಸ್ಥಾನ ಸಿಗುವುದಾದರೆ ನಾವು ಖಂಡಿತವಾಗಿ ಸ್ವಾಗತ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬಹಳ ಅರ್ಥಗರ್ಭಿತವಾಗಿ ತಾವೇ ಹೇಳಬೇಕು, ತಾವೇ ಹೇಳಬೇಕು ಎಂದು ಹೇಳಿದ್ದಾರೆ. ತಾವು ಇರುವುದಿಲ್ಲ ಎಂಬ ಶಂಕೆ ಅವರಿಗೆ ಏನಾದರೂ ಬಂದಿದೆಯೇ?

ಅಧ್ಯಕ್ಷರು : ಇರುತ್ತೇನೆ, ನಾನು ಇರುವುದಿಲ್ಲ ಎಂಬ ಅಪನಂಬಿಕೆ ಬೇಡ.

ಶ್ರೀ ವಾಟಾಳ್ ನಾಗರಾಜ್ : ತಾವು ಈ ಸದನದ ಅಧ್ಯಕ್ಷರಾಗಿ ತೀರ್ಪನ್ನು ಕೊಡಬೇಕು, ತಾವು ನಮ್ಮ ರಾಜ್ಯದಲ್ಲಿರುತ್ತೀರಿ, ನಮ್ಮ ರಾಜ್ಯದ ಬಗ್ಗೆ ತಮಗೆ ಆಸಕ್ತಿ ಇದೆ, ತಾವು ನಮ್ಮ ರಾಜ್ಯದ ಆಸ್ತಿ, ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ತಾವು ಈ ಸದನದ ಅಧ್ಯಕ್ಷರಾಗಿ ಮುಂದುವರಿಯುತ್ತೀರಿ ಎಂಬ ಆಶಯವನ್ನು, ಅಭಿಮಾನವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ.

ಪ್ರಕಟಣೆ

ವಿಷಯ : 9ನೇ ವಿಧಾನ ಸಭೆಯ 7ನೇ ಅಧಿವೇಶನದಲ್ಲಿ ನಡೆದ ಕಾರ್ಯಕಲಾಪಗಳ ಬಗ್ಗೆ ವಿವರ.

ಅಧ್ಯಕ್ಷರು :

ಮಾನ್ಯ ಸದಸ್ಯರೆ,

ಪ್ರಸ್ತುತ ಆಯವ್ಯಯ ಅಧಿವೇಶನ ಇಂದಿಗೆ ಮುಕ್ತಾಯವಾಗಲಿದೆ. ಕಳೆದ 32 ದಿವಸಗಳ ಸದನದ ಕಲಾಪದತ್ತ ತಮ್ಮ ಗಮನ ಸೆಳೆದು, ಪ್ರಜಾಪ್ರತಿನಿಧಿಗಳಾಗಿ ನಾವು ನಮ್ಮ ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ನಿರ್ವಹಿಸಿದ್ದೇವೆ? ನಮ್ಮ ನಮ್ಮ ಕ್ಷೇತ್ರಗಳ ಸಮಸ್ಯೆಗಳನ್ನು ಸಮರ್ಪಕವಾಗಿ ಸರ್ಕಾರದ ಮುಂದಿಡುವುದು ಸಾಧ್ಯವಾಗಿದೆಯೇ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಸಭೆಯ ಮೂಲಕ ರಾಜ್ಯದ ಗಮನ ಸೆಳೆಯುವಲ್ಲಿ ನಾವು ಸಾರ್ಥಕವಾಗಿದ್ದೇವೆಯೇ? ಸರ್ಕಾರವನ್ನು ಜನರ ಹಾಗೂ ನಮ್ಮ ಅನಿಸಿಕೆಗಳಿಗೆ ಸ್ಪಂದಿಸುವಂತೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆಯೆ? ಅವರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಫಲರಾಗಿದ್ದೇವೆಯೆ? ನಮ್ಮ ಪ್ರಶ್ನೆಗಳಿಗೆ ದೊರೆತ ಉತ್ತರಗಳು ಸಮರ್ಪಕವಾಗಿದ್ದವ ಇಲ್ಲದಿದ್ದರೆ ಏಕೆ? ಇತ್ತೀಚಿನ ದಿನಗಳ ನಮ್ಮ ಅನುಭವ ಹಿನ್ನೆಲೆಯಲ್ಲಿ ಮೂಲಭೂತವಾಗಿ ಈ ಪ್ರಚಲಿತ ವಿಚಾರಗಳು ಹೆಚ್ಚು ಮಹತ್ವವನ್ನು ಗಳಿಸಿಕೊಂಡಿವೆ.

ಶಾಸನಸಭೆಗಳ ಅಧಿವೇಶನದಲ್ಲಿ ಆಯವ್ಯಯದ ಅಧಿವೇಶನಗಳಿಗೆ ಹೆಚ್ಚು ಮಹತ್ವ ಏತಕ್ಕೆಂದರೆ ಈ ಅಧಿವೇಶನಗಳಲ್ಲಿ ಮುಂದಿನ ಒಂದು ವರ್ಷದಲ್ಲಿ ಸರ್ಕಾರ ಮಾಡಲು ಉದ್ದೇಶಿಸಿರುವ ಕೆಲಸ ಕಾರ್ಯಗಳು, ಅಂದಾಜು ವೆಚ್ಚ, ನಿರೀಕ್ಷಿತ ಆದಾಯ, ಅದರ ಮೂಲಗಳು, ಉದ್ದೇಶಿತ ತೆರಿಗೆ, ಸುಂಕ ಮೊದಲಾದ ವಿವರಗಳನ್ನು ಮುಂಗಡವಾಗಿ ಸಭೆಯ ಮುಂದಿಡಲಾಗುತ್ತದೆ. ಈ ಮುಂಗಡ ಪತ್ರದ ಮೇಲ ಸಾಕಷ್ಟು ಚರ್ಚೆ ನಡೆದು, ಸದನದ ಎಲ್ಲಾ ವರ್ಗಗಳ ಅದರಲ್ಲೂ ವಿರೋಧ ಪಕ್ಷಗಳ ಸದಸ್ಯರ ಅಭಿಪ್ರಾಯ ಹೊರಹೊಮ್ಮಿದ ಮೇಲೆ ಸಂಬಂಧಪಟ್ಟ ಸಚಿವರು ತಮ್ಮ ತಮ್ಮ ಇಲಾಖೆಗಳ ಮೇಲಿನ ಚರ್ಚೆಗೆ ಉತ್ತರಿಸಿ ತಮ್ಮ ಬೇಡಿಕೆಗಳಿಗೆ ಸದನದ ಒಪ್ಪಿಗೆ ಪಡೆಯುವುದು ಹಿಂದಿನಿಂದಲೂ ರೂಢಿಯಲ್ಲಿದೆ.

ಇದಕ್ಕೆ ಅಗತ್ಯವಾದಷ್ಟು ಕಾಲವನ್ನು ಮೀಸಲಿಡಬೇಕಾದದ್ದು ಕಾರ್ಯಾಂಗ ಹಾಗೂ ಶಾಸಕಾಂಗಗಳ ಆದ್ಯ ಕರ್ತವ್ಯ. ಹೀಗಾದಾಗ ಸದಸ್ಯರು ತಮ್ಮ ಒಟ್ಟಾರೆ ಅಭಿಪ್ರಾಯಗಳ ಜೊತೆಗೆ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆಗಿರುವ ಹಾಗೂ ಆಗಬೇಕಾದ ಕೆಲಸ ಕಾರ್ಯಗಳ ಮೇಲೆ ಕ್ಷಕಿರಣ